# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಡ್ವೋಕೇಟ್ ಜನರಲ್ ಕಛೇರಿಯಲ್ಲಿ ಖಾಲಿಯಿರುವ 7 ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ಸದರಿ ಕಛೇರಿಗೆ ಹೆಚ್ಚುವರಿಯಾಗಿ 30 ಶೀಘ್ರಲಿಪಿಗಾರರ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: 1. ಆಡಳಿತಾಧಿಕಾರಿ ಅಡ್ವೊಕೇಟ್ ಜನರಲ್ ಕಛೇರಿಯವರ ಪತ್ರ ಸಂಖ್ಯೆ: 111/ಎ.ಜಿ/ ಇ.ಎಸ್.ಟಿ/2017-2018, ದಿ: 04.05.2017.

2. ಆಡಳಿತಾಧಿಕಾರಿ ಅಡ್ವೊಕೇಟ್ ಜನರಲ್ ಕಛೇರಿಯವರ ಪತ್ರ ಸಂಖ್ಯೆ:337/ಎ.ಜಿ/ ಇ.ಎಸ್.ಟಿ/2017-2018, ದಿ: 30.06.2017.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 04.05.2017 ರ ಪತ್ರದಲ್ಲಿ ಅಡ್ವೋಕೇಟ್ ಜನರಲ್ ಕಚೇರಿಯ ಆಡಳಿತಾಧಿಕಾರಿಗಳು ತಮ್ಮ ಕಛೇರಿಯಲ್ಲಿ ಪ್ರಸ್ತುತ 7 ಶೀಘ್ರಲಿಪಿಗಾರರ ಹುದ್ದೆಗಳು ಖಾಲಿಯಿರುವುದೆಂದೂ ಶೀಘ್ರಲಿಪಿಗಾರರ ತೀವ್ರ ಕೊರತೆ ಇರುವ ಹಿನ್ನೆಲೆಯಲ್ಲಿ ಸದರಿ 7 ಖಾಲಿ ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ: 30.06.2017 ರ ಪತ್ರದಲ್ಲಿ ಅಡ್ವೋಕೇಟ್ ಜನರಲ್ ಕಚೇರಿಯ ಆಡಳಿತಾಧಿಕಾರಿಗಳು ತಮ್ಮ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 96 ಕಾನೂನು ಅಧಿಕಾರಿಗಳ ಕಾರ್ಯಗಳನ್ನು ಕೇವಲ 36 ಶೀಘ್ರಲಿಪಿಗಾರರು ಪ್ರಸ್ತುತ ನಿರ್ವಹಿಸುತ್ತಿದ್ದು ಇದರಿಂದ ಶೀಘ್ರಲಿಪಿಗಾರರ ಕೊರತೆಯುಂಟಾಗಿ ಮಾನ್ಯ ಬೆಂಗಳೂರು, ಧಾರವಾಡ, ಮತ್ತು ಕಲಬುರ್ಗಿ ಉಚ್ಚನ್ಯಾಯಾಲಯ ಹಾಗೂ ಕೆ.ಎ.ಟಿ. ಯಲ್ಲಿ ಹಲವು ಸರ್ಕಾರದ ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಇರುತ್ತವೆಂದೂ ಹಲವು ಬಾರಿ ಮಾನ್ಯ ನ್ಯಾಯಾಧೀಶರುಗಳು ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡದಿರುವುದಕ್ಕೆ ಸಂಬಂಧಿಸಿದಂತೆ ಮೌಖಿಕವಾಗಿ ಅಸಮಾಧಾನ ವ್ಯಕ್ತಪಡಿಸಿರುತ್ತಾರೆಂದು ಆದುದರಿಂದ, ಅಡ್ವೋಕೇಟ್ ಜನರಲ್ ಕಛೇರಿಗೆ ಹೆಚ್ಚುವರಿಯಾಗಿ 42 ಶೀಘ್ರಲಿಪಿಗಾರರ ಹುದ್ದೆಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿರುವ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಲಾ 137 ಎಲ್ಎಡಿ 2017**
**ಬೆಂಗಳೂರು, ದಿನಾಂಕ:08.09.2017**

ಪ್ರಸ್ತಾವನೆಯನ್ನು ವಿವರಿಸಿರುವ ಹಿನ್ನೆಲೆಯಲ್ಲಿ ಅಡ್ವೋಕೇಟ್ ಜನರಲ್‌ರವರ ಕಛೇರಿಯಲ್ಲಿ ಖಾಲಿಯಿರುವ 7 ಹುದ್ದೆಗಳನ್ನು ಭರ್ತಿಮಾಡಲು ಹಾಗೂ ಅಡ್ವೋಕೇಟ್ ಜನರಲ್ ಕಛೇರಿಗೆ ಹೆಚ್ಚುವರಿಯಾಗಿ 30 ಶೀಘ್ರಲಿಪಿಗಾರರ ಹುದ್ದೆಗಳನ್ನು ಸೃಜಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಭರ್ತಿಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

2/-

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 423 ವೆಚ್ಚ10/2017, ದಿನಾಂಕ: 18.08.2017ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಆದಿನಾರಾಯಣ) 8/9/17
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಕಾನೂನು ಇಲಾಖೆ(ಆಡಳಿತ-2)

ಗೆ,

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ, ಬೆಂಗಳೂರು.
2. ಅಡ್ವೊಕೇಟ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನ ಸೌಧ.
6. ಆಡಳಿತಾಧಿಕಾರಿ, ಅಡ್ವೊಕೇಟ್ ಜನರಲ್‌ರವರ ಕಛೇರಿ, ಉಚ್ಚನ್ಯಾಯಾಲಯ ಕಟ್ಟಡ, ಬೆಂಗಳೂರು-1
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇವರ ಆಪ್ತ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ.
7. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾನೂನು ಇಲಾಖೆ (ಆಡಳಿತ-2), ವಿಧಾನಸೌಧ.
8. ಶ್ರೀ ಮಲ್ಲಪ್ಪ, ಇ-ಗವರ್ನೆನ್ಸ್ ರವರಿಗೆ ಈ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸುವಂತೆ ಕೋರಿಕೆ.
9. ಹೆಚ್ಚುವರಿ/ ಶಾಖಾ ರಕ್ಷಾ ಕಡತಕ್ಕೆ.